ಅನುಭವ

# ನನ್ನ ಆಪರೇಷನ್..


**ಆಂಜಿಯೋಗ್ರಾಮ್, ಆಂಜಿಯೋಪ್ಲಾಸ್ಟಿ ಎಂದರೆ ಭಯ ಬೀಳುವವರು ಬಹಳ ಮಂದಿ. ಈ ಎರಡೂ ರೀತಿಯ ಚಿಕಿತ್ಸೆಯಿಂದ ಯಾವುದೇ ಭಯ ಪಡಬೇಕಾಗಿಲ್ಲ.**

★ **ಹೆಚ್. ಗುಂಡೂರಾವ್**

ಸ್ಥಳ: ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ, ಬೆಂಗಳೂರು
ದಿನಾಂಕ: 18-05-2010
ಚಿಕಿತ್ಸೆ: ಆಂಜಿಯೋಗ್ರಾಮ್ ಮತ್ತು ಆಂಜಿಯೋಪ್ಲಾಸ್ಟಿ.

ಇದ್ದಕ್ಕಿದ್ದ ಹಾಗೆ ಎದೆನೋವು. ತಕ್ಷಣ ವೈದ್ಯರತ್ತ ನನನ್ನು ಕರೆದೊಯ್ದರು. ಪರೀಕ್ಷೆ ಮಾಡಿದ ವೈದ್ಯರು ಸಲಹೆ ನೀಡಿದ್ದು ಆಂಜಿಯೋಗ್ರಾಮ್ ಮಾಡಿಸಿ ಎಂದು. ಸರಿ, ಒಂದು ದಿನ ಆಸ್ಪತ್ರೆಗೆ ಹೋದೆ. ಆಂಜಿಯೋಗ್ರಾಮ್ ನಡೆಸಲು ಸಿದ್ಧತೆ ನಡೆಸಿ ಮೇಜಿನ ಮೇಲೆ ನನ್ನನ್ನು ಮಲಗಿಸಿದರು. ಆಗ ವೈದ್ಯರ ತಂಡದ ಒಬ್ಬರು 'ಈಗ ನಿಮಗೆ ಒಂದು ಇಂಜೆಕ್ಷನ್ ಕೊಡುತ್ತೇವೆ' ಎಂದರು. ನಾನು 'ಲೋಕಲ್ ಅನಸ್ತೇಷಿಯಾನ?' ಎಂದು ಕೇಳಿದೆ. ಅವರು 'ಹೌದು' ಎಂದರು. ನಂತರ ಇಂಜೆಕ್ಷನ್ ಕೊಟ್ಟರು. ನನಗೆ ಯಾವ ಚುಚ್ಚಿದ ಅನುಭವವೂ ಆಗಲಿಲ್ಲ.

ಬಲತೊಡೆಯ ಹಿಂಭಾಗದಲ್ಲಿ 'ಪ್ರೊಸೀಜರ್' ಪ್ರಾರಂಭಿಸಿದರು. ಕೆಲವು ನಿಮಿಷಗಳ ನಂತರ 'ನಿಮಗೆ ಒಂದು ಡೈ ಇಂಜೆಕ್ಟ್ ಮಾಡುತ್ತೇವೆ' ಎಂದರು. ಆಗ ನಾನು 'ನೀವು ಡೈ ಇಂಜೆಕ್ಟ್ ಮಾಡಿದ ನಂತರ ಮೈಯೆಲ್ಲಾ ಬಿಸಿ-ಬಿಸಿಯಾಗಿ ಕಿವಿಯಲ್ಲಿ ಏನೋ ತುಂಬಿಕೊಂಡಂತಾಗುವುದು, ಹೌದಾ?' ಎಂದು ಕೇಳಿದೆ. ಅದಕ್ಕೆ ಅವರು 'ಆ ತರಹದ ಡೈ ನಿಮಗೆ ಯಾವಾಗ ಕೊಟ್ಟಿದ್ದರು?' ಎಂದು ಕೇಳಿದರು. 'ಹಿಂದೊಮ್ಮೆ ಮೆದುಳಿನ ಸ್ಕ್ಯಾನ್ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಕೊಟ್ಟಿದ್ದರು' ಎಂದೆ. ಅದಕ್ಕೆ ಅವರು 'ಇದು ಆ ರೀತಿಯದ್ದಲ್ಲ' ಎಂದರು. ಆ ಹೊತ್ತಿಗೆ ಆಗಲೇ 'ಡೈ' ಇಂಜೆಕ್ಟ್ ಮಾಡಿದ್ದರೂ ನನಗೆ ಯಾವುದೇ ಅನುಭವವೂ ಆಗುತ್ತಿದ್ದಿಲ್ಲ.



ನಂತರ ಕೆಲವೇ ನಿಮಿಷಗಳಲ್ಲಿ ವೈದ್ಯರೊಬ್ಬರು 'ಆಂಜಿಯೋಗ್ರಾಮ್' ಆಯಿತೆಂದು ಹೇಳಿದರು. ನಾನು ಆರಾಮವಾಗಿಯೇ ಇದ್ದೆ. ಆಗ ವೈದ್ಯರೊಬ್ಬರು ನನಗೆ "ನಿಮಗೆ ಒಳ್ಳೆಯ 'ವಿಲ್ ಪವರ್' ಇದೆ" ಎಂದರು. ನಾವೇನೂ ಮಾತನಾಡಲಿಲ್ಲ. ಬಳಿಕ ನನ್ನನ್ನು ವಾರ್ಡಿಗೆ ಸ್ಥಳಾಂತರಿಸಿದರು.

ಮಾರನೇ ದಿನ ವರದಿ ಬಂತು. ಆ ವರದಿಯ ಆಧಾರದಲ್ಲಿ ವೈದ್ಯರು 'ಎರಡು- ಮೂರು ಕಡೆ ರಕ್ತನಾಳದಲ್ಲಿ ತಡೆಗಳಿವೆ. ಒಮ್ಮೆಗೆ 'ಆಂಜಿಯೋಪ್ಲಾಸ್ಟಿ' ಮಾಡಿಸಿಕೊಂಡು ಹೋಗಿ" ಎಂದು ಸಲಹೆ ನೀಡಿದರು. ನಾನು ಆಸ್ಪತ್ರೆಗೆ ಬರುವಾಗಲೇ ಈ ರೀತಿಯ ಸಂದರ್ಭ ಬರಬಹುದೆಂದು ನಿರೀಕ್ಷಿಸಿಯೇ ಇದ್ದೆ. ಅದರಂತೆ ನಾನು ಒಪ್ಪಿಗೆ ನೀಡಿದ ನಂತರ ಮಾರನೇ ದಿನ 'ಆಂಜಿಯೋಪ್ಲಾಸ್ಟಿ' ಮಾಡಲು ವೈದ್ಯರು ನಿರ್ಧರಿಸಿದರು.

ಅದು 2010ರ ಮೇ, 20. ನನ್ನ 'ಆಂಜಿಯೋಪ್ಲಾಸ್ಟಿ'ಯ ದಿನ. ಬೆಳಿಗ್ಗೆ ಸುಮಾರು 10.30ಕ್ಕೆ ಚಿಕಿತ್ಸಾ ಕೊಠಡಿಗೆ ಕರೆ ತಂದು ಮೇಜಿನ ಮೇಲೆ ನನ್ನನ್ನು ಮಲಗಿಸಿದರು. 'ಪ್ರೊಸೀಜರ್' ಪ್ರಾರಂಭಿಸಿದರು. ನಾನು ಎಚ್ಚರವಾಗಿಯೇ ಇದ್ದೆ. ಹಿಂದೆ ಮಾಡಿದ ಜಾಗದಿಂದಲೇ ಒಂದು 'ವೈರ್' ಮಾದರಿಯ 'ಉಪಕರಣವನ್ನು' ತೂರಿಸಲಾಯಿತೆಂದು ಕಾಣುತ್ತದೆ. ಅದಕ್ಕೆ ಒಂದು 'ಬೆಲೂನ್' ಜೋಡಿಸಿರುತ್ತದೆ ಎಂದುಕೊಂಡಿದ್ದೇನೆ. ಕೆಲವು ನಿಮಿಷಗಳ ನಂತರ 'ಇನ್ನೂ ಪ್ರೆಷರ್ ಕೊಡಿ' ಎಂದು ಎರಡು-ಮೂರು ಬಾರಿ ಒಬ್ಬರು ಹೇಳುತ್ತಿದ್ದರು. ನಂತರ ಒಮ್ಮೆಗೆ 'ಬ್ಲಾಸ್ಟ್' ಎಂದರು.

ಆದರೆ ನನಗೆ ಯಾವ ಅನುಭವವೂ ಆಗುತ್ತಿದ್ದಿಲ್ಲ. ಎಡಗಡೆ ಇದ್ದ ಸ್ಕ್ರೀನ್‌ನಲ್ಲಿ ಮಂಕಾಗಿ ಏನೋ ಕಾಣಿಸುತ್ತಿದ್ದರೂ, ಅದು ಏನೆಂದು ಗೊತ್ತಾಗುತ್ತಿರಲಿಲ್ಲ. ಆಗ ತಂಡದ ಸದಸ್ಯರಲ್ಲೊಬ್ಬರು ವೈದ್ಯರಿಗೆ 'ಸ್ವಲ್ಪ ಮುಂದೆ ಹೋಗಿ, ಸ್ವಲ್ಪ ಹಿಂದೆ ಬನ್ನಿ' ಎಂದು ಪದೇ ಪದೇ ಹೇಳುತ್ತಿದ್ದರು. ಅವರು 'ಸ್ಟಂಟ್' ಅನ್ನು ಸರಿಯಾದ ಜಾಗದಲ್ಲಿ ಕೂಡಿಸಲು ಪ್ರಯತ್ನಿಸುತ್ತಿದ್ದರೆಂದು ಕಾಣುತ್ತದೆ. ನಂತರ ಅವರು ವೈದ್ಯರಿಗೆ ಈಗ 'ಸರಿಯಾಗಿದೆ' ಎಂದರು.

ಕೆಲವು ನಿಮಿಷಗಳ ನಂತರ ವೈದ್ಯರು 'ಆಂಜಿಯೋಪ್ಲಾಸ್ಟಿ' ಮುಗಿಯಿತೆಂದು ಹೇಳಿ 'ಎಲ್ಲವೂ ಸರಿಯಾಗಿಯೇ ಆಗಿದೆ, ನೀವೂ ಸಹ ನಾವು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದೀರಲ್ಲಾ, ನಿಮಗೆ ಸಹ ಚೆನ್ನಾಗಿ ಅರ್ಥವಾಗಿದೆ ಅಲ್ಲವೇ' ಎಂದು ಪ್ರಶ್ನಿಸಿದರು. ನಾನು 'ಹೌದು, ಎಲ್ಲವನ್ನೂ ಕೇಳಿಸಿಕೊಂಡೆ' ಎಂದು ಹೇಳಿದೆ.

ನಂತರ ನನ್ನನ್ನು ತೀವ್ರ ನಿಗಾ ಘಟಕಕ್ಕೆ (ಐಸಿಯು) ಕರೆದೊಯ್ದರು. ನಾನು ಇಡೀ ವೈದ್ಯರ ಹಾಗೂ ತಂಡಕ್ಕೆ 'ಥ್ಯಾಂಕ್ಸ್ ಟು ಆಲ್' ಎಂದೆ. ಅವರಲ್ಲೂ ಒಬ್ಬರು 'ಥ್ಯಾಂಕ್ ಯು ಸಾರ್' ಎಂದರು.

ಈ ಚಿಕಿತ್ಸೆ ಆಗಿ ಇದೀಗ ಎರಡು ವರ್ಷಗಳೇ ಕಳೆದಿವೆ. ಈಗ ಆರೋಗ್ಯ ಚೆನ್ನಾಗಿದೆ. ಯಾವುದೇ ಸಮಸ್ಯೆ ನನ್ನನ್ನು ಕಾಡಿಲ್ಲ.

ಆಂಜಿಯೋಗ್ರಾಮ್, ಆಂಜಿಯೋಪ್ಲಾಸ್ಟಿ ಎಂದು ಹೆದರುವ ಹೃದಯ ರೋಗಿಗಳಿಗೆ ಈ ಅನುಭವ ಕಥನ ಖಂಡಿತವಾಗಿಯೂ ಧೈರ್ಯ ಕೊಡಬಲ್ಲದು. ■